## ಮೋಸ

ಪತ್ರಿಕೆ ಮಾರುವ ಹುಡುಗ ದೊಡ್ಡ ದನಿಯಲ್ಲಿ ಕೂಗುತ್ತಿದ್ದ. 'ಬಿಸಿ ಬಿಸಿ ಸುದ್ದಿ... 37 ಜನರಿಗೆ ಮೋಸ...' ಇದೇನಪ್ಪ ಅಂಥ ದೊಡ್ಡ ಮೋಸ ಎಂದುಕೊಂಡು ವೆಂಕಿ ಪತ್ರಿಕೆ ಕೊಂಡು ಮುಖಪುಟ, ಒಳಪುಟಗಳಲ್ಲೆಲ್ಲ ಕಣ್ಣಾಡಿಸಿದ. 37 ಜನರಿಗೆ ಮೋಸವಾದ ಕುರಿತು ಎಲ್ಲೂ ಸುದ್ದಿಯೇ ಇರಲಿಲ್ಲ! ಅಚ್ಚರಿಯಿಂದ ಆ ಹುಡುಗನಿಗಾಗಿ ಸುತ್ತ ನೋಡಿದ. ಸ್ವಲ್ಪ ದೂರದಲ್ಲಿ ಅದೇ ಹುಡುಗ ದೊಡ್ಡ ದನಿಯಲ್ಲಿ ಕೂಗುತ್ತಿದ್ದ. 'ಬಿಸಿ ಬಿಸಿ ಸುದ್ದಿ... 38 ಜನರಿಗೆ ಮೋಸ!...'

**ಕೆ. ಶ್ರೀನಿವಾಸ ರಾವ್**



## ತಿರುಮಂತ್ರ!



ಹಲ್ಲುಜ್ಜಿದ ಬಳಿಕ ಟೂಥ್‌ಪೇಸ್ಟ್ ಟ್ಯೂಬಿನ ಮುಚ್ಚಳವನ್ನು ಮರಳಿ ಹಾಕಬೇಕೆಂದು ತಮ್ಮ 25 ವರ್ಷಗಳ ವೈವಾಹಿಕ ಜೀವನದಲ್ಲಿ ಗುಂಡನ ಪತ್ನಿ ಹೇಳುತ್ತಲೆ ಬಂದಿದ್ದಳು. 25ನೇ ವಾರ್ಷಿಕೋತ್ಸವದಂದು ಗುಂಡ ಈ ದುರಭ್ಯಾಸವನ್ನು ಬದಲಾಯಿಸಿಕೊಳ್ಳಲು ನಿರ್ಧರಿಸಿದ್ದ. ಅದಕ್ಕನುಗುಣವಾಗಿ ವಾರ ಮುಂಚೆಯೇ ಟೂಥ್‌ಪೇಸ್ಟ್ ಟ್ಯೂಬಿನ ಮುಚ್ಚಳವನ್ನು ಚಾಚೂ ತಪ್ಪದೆ ಹಾಕಿ ಪತ್ನಿಯ ಮೆಚ್ಚುಗೆಯ ನಿರೀಕ್ಷೆಯಲ್ಲಿದ್ದ. ಆದರೆ, ಆಕೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಕೊನೆಗೂ ವಾರ ಕಳೆದ ಬಳಿಕ ಒಂದು ರಾತ್ರಿ ಶ್ರೀಮತಿ ಗುಂಡ ಮೌನ ಮುರಿದಳು, 'ಯಾಕ್ರೀ ಒಂದು ವಾರದಿಂದ ನೀವು ಹಲ್ಲುಜ್ಜುತ್ತಿಲ್ಲ?' ಗುಂಡ ಮೂಕವಿಸ್ಮಿತನಾದ!

**ರಮಣ್ ಶೆಟ್ಟಿ ರೆಂಜಾಳ್**